ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
**ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ**

ಸ್ವಚ್ಛ ಭಾರತ
ಒಂದು ಹೆಜ್ಜೆ ಸ್ವಚ್ಛತೆಯ ಕಡೆಗೆ

# ಹಸಿ ಕಸದಿಂದ ಗೊಬ್ಬರ ತಯಾರಿ; ಸ್ವಚ್ಛ ಗ್ರಾಮಕ್ಕೆ ಉತ್ತರ ಕನ್ನಡ ಜಿಲ್ಲೆಯ ಕಾಂಪೋಸ್ಟ್ ಯೋಜನೆ ಪ್ರೇರಣೆ





ಹಸಿ ಕಸವನ್ನು ಗೊಬ್ಬರವಾಗಿ ಪರಿವರ್ತಿಸಬಹುದು ಎಂಬುವುದು ಬಹುತೇಕ ಎಲ್ಲರಿಗೂ ತಿಳಿದಿರುವ ವಿಷಯ. ಆದರೆ, ಈ ಕೆಲಸವನ್ನು ಪರಿಣಾಮಕಾರಿಯಾಗಿ ಮಾಡುವವರ ಸಂಖ್ಯೆ ತುಂಬಾ ಕಡಿಮೆ. ಈ ನಿಟ್ಟಿನಲ್ಲಿ ಉತ್ತರ ಕರ್ನಾಟಕ ಜಿಲ್ಲಾ ಪಂಚಾಯತ್ ಮುಂದಡಿ ಇಟ್ಟಿದ್ದು, ಹಸಿ ಕಸವನ್ನು ಜೈವಿಕ ಗೊಬ್ಬರವನ್ನಾಗಿ ಮಾಡುವ ಶ್ಲಾಘನೀಯ ಕಾರ್ಯ ಆರಂಭಿಸಿದೆ. ಅದುವೇ ಪೈಪ್ ಕಾಂಪೋಸ್ಟ್ ಯೋಜನೆ.

ಹಸಿ ಕಸವನ್ನು ಎಲ್ಲೆಂದರಲ್ಲಿ ಎಸೆದರೆ ಅದು ಪರಿಸರ ಮಾಲಿನ್ಯ. ಅದೇ ಕಸವನ್ನು ಒಂದೆಡೆ ಸಂಗ್ರಹಿಸಿ ಜೈವಿಕ ಗೊಬ್ಬರವಾಗಿಸಿದರೆ ಕಸದಿಂದ ರಸದ ಜೊತೆಗೆ, ಪರಿಸರವೂ ಸ್ವಚ್ಛವಾಗುತ್ತದೆ. ಕಸ ವಿಲೇವಾರಿ ಮಾಡುವ ದೊಡ್ಡ ತಲೆನೋವು ಬಹುತೇಕ ಬಗೆಹರಿದಂತಾಗುತ್ತದೆ. ಉತ್ತರ ಕನ್ನಡದ ಕೆಲವು ಗ್ರಾಮಗಳಲ್ಲಿ ಈ ಕಾಂಪೋಸ್ಟ್ ಯೋಜನೆ ಯಶಸ್ವಿಯಾಗುತ್ತಿದ್ದು, ಜನರಿಂದ ವ್ಯಾಪಕ ಬೆಂಬಲ ಸಿಗುತ್ತಿದೆ. ಈಗಾಗಲೇ 70ಕ್ಕೂ ಹೆಚ್ಚು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಅಂಗನವಾಡಿ ಹಾಗೂ ಶಾಲೆಗಳಲ್ಲಿ ಸರಳವಾಗಿ ಪೈಪ್ ಕಾಂಪೋಸ್ಟ್ ಯೋಜನೆಯನ್ನು ಪ್ರಾಯೋಗಿಕವಾಗಿ ಅನುಷ್ಠಾನಗೊಳಿಸಲಾಗಿದ್ದು, ಜಿಲ್ಲೆಯನ್ನು ಹಸಿ ಕಸದಿಂದ ಮುಕ್ತವಾಗಿಸಲು ಮುನ್ನುಡಿ ಬರೆಯಲಾಗಿದೆ.

# ಪೈಪ್ ಕಾಂಪೋಸ್ಟ್ ಕೆಲಸವೇನು?

ಅಡುಗೆ ಮನೆಯಲ್ಲಿ ದಿನನಿತ್ಯ ಉತ್ಪತ್ತಿಯಾಗುವ ಹಸಿ ಕಸವನ್ನು ಸಿಮೆಂಟ್ ಅಥವಾ ಪಿವಿಸಿ ಪೈಪ್ ಬಳಸಿ ಜೈವಿಕ ಗೊಬ್ಬರವನ್ನಾಗಿ ಮಾರ್ಪಡಿಸುವುದೇ ಕಾಂಪೋಸ್ಟ್ ಯೋಜನೆ. ಸುಮಾರು 6 ಅಡಿಯಷ್ಟು ಉದ್ದದ ಪೈಪ್‌ನ ಕೆಳಭಾಗವನ್ನು ಭೂಮಿಯಲ್ಲಿ ಹೂತು, ಅದಕ್ಕೆ ಸೆಗಣಿ ನೀರು ಹಾಗೂ ಸ್ವಲ್ಪ ಮಣ್ಣು ಹಾಕಲಾಗುತ್ತದೆ. ಅದರ ಮೇಲೆ ನಿತ್ಯ ಹಸಿ ಕಸವನ್ನು ಹಾಕುತ್ತಾ ಬರಲಾಗುತ್ತದೆ. ಕ್ರಮೇಣ ಅದು ಗೊಬ್ಬರವಾಗಿ ಮಾರ್ಪಾಡಾಗುತ್ತದೆ

# ಏನಿದರ ಪ್ರಯೋಜನ?

ಮನೆ, ಶಾಲೆ ಅಥವಾ ಅಂಗನವಾಡಿಗಳಲ್ಲಿ ಸುಲಭವಾಗಿ ಪೈಪ್ ಕಾಂಪೋಸ್ಟ್ ಅಳವಡಿಸುವುದರಿಂದ ಹಸಿ ಕಸವನ್ನು ಸುಲಭವಾಗಿ ನಿರ್ವಹಿಸಿದಂತಾಗುತ್ತದೆ. ಇದರ ವಿಲೇವಾರಿ ಬಗ್ಗೆ ಚಿಂತಿಸುವ ಅಗತ್ಯವೇ ಇರುವುದಿಲ್ಲ. ಎಲ್ಲೆಂದರಲ್ಲಿ ತ್ಯಾಜ್ಯವನ್ನು ಎಸೆದು ಪರಿಸರ ಮಾಲಿನ್ಯ ಮಾಡುವ ಬದಲಿಗೆ ಅದೇ ಕಸದಿಂದ ಫಲವತ್ತಾದ ಜೈವಿಕ ಗೊಬ್ಬರ ಸಿಗುತ್ತದೆ. ಇದನ್ನು ತೋಟಗಳಿಗೆ ಬಳಸಬಹುದಾಗಿದ್ದು ಕಾಂಪೋಸ್ಟ್ ಅಳವಡಿಸಲು ಹೆಚ್ಚು ಸ್ಥಳಾವಕಾಶವೂ ಬೇಕಾಗಿಲ್ಲ ಜೊತೆಗೆ ಇದಕ್ಕೆ ಖರ್ಚು ಕೂಡಾ ಕಡಿಮೆ. ದುರ್ನಾತ ಬೀರುವ ಹಸಿ ಕಸದಿಂದ ಸೊಳ್ಳೆಗಳ ಉತ್ಪತ್ತಿ ಹೆಚ್ಚಾಗುತ್ತದೆ. ಈ ಕಾಂಪೋಸ್ಟ್ ವಿಧಾನ ಸೊಳ್ಳೆಗಳ ನಿಯಂತ್ರಣಕ್ಕೂ ಸಹಕಾರಿ. ಕಸದ ಸರಳ ನಿರ್ವಹಣೆಗೆ ಪೈಪ್ ಕಾಂಪೋಸ್ಟ್ ವಿಧಾನ ಅತ್ಯುತ್ತಮ ಆಯ್ಕೆ ಎಂದರೆ ಅತಿಶಯೋಕ್ತಿ ಅಲ್ಲ.

# ಎಲ್ಲಾ ಗ್ರಾಮ ಪಂಚಾಯಿತಿಗಳಿಗೂ ವಿಸ್ತರಣೆ

*ಹಸಿ ಕಸದ ವಿಲೇವಾರಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಸವಾಲಿನ ವಿಷಯವಾಗಿತ್ತು. ಇದಕ್ಕೆ ಜಿಲ್ಲಾ ಮಟ್ಟದಲ್ಲಿ ಕಂಡುಕೊಂಡ ಪರಿಹಾರವೇ ಈ ಕಾಂಪೋಸ್ಟ್. ಕೆಲವು ಗ್ರಾಮಗಳಲ್ಲಿ ಆರಂಭವಾದ ಈ ಉಪಕ್ರಮಕ್ಕೆ ಜನರಿಂದ ಉತ್ತಮ ಸಹಕಾರ ಸಿಗುತ್ತಿದ್ದು, ಮುಂದೆ ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯತ್‌ಗಳಿಗೂ ವಿಸ್ತರಿಸುವ ಯೋಜನೆಯ ಜಿಲ್ಲಾಡಳಿತದ್ದು. ಯೋಜನೆಯ ಪರಿಣಾಮಕಾರಿ ಅನುಷ್ಠಾನಕ್ಕೆ ಪ್ರತಿ ಗ್ರಾಮ ಪಂಚಾಯಿತಿಗಳ ಪಿಡಿಒ ಹಾಗೂ ಅಧ್ಯಕ್ಷರಿಗೆ ತರಬೇತಿಯನ್ನೂ ನೀಡಲಾಗುತ್ತಿದೆ. ಎಲ್ಲವೂ ಅಂದುಕೊಂಡಂತೆ ನಡೆದರೆ, ಪೈಪ್ ಕಾಂಪೋಸ್ಟ್ ಅಳವಡಿಕೆಯಲ್ಲೂ ಜಿಲ್ಲೆ ರಾಜ್ಯಕ್ಕೆ ಮಾದರಿಯಾಗಲಿದೆ.*

